**Review Of Research**
**Vol -2 , ISSUE –III, Dec - 2012**
**ISSN No - 2249-894X** Available online at www.ror.isrj.org

ORIGINAL ARTICLE

# ಶ್ರೀ ರಾಮಾಯಣ ದರ್ಶನಂ ಮತ್ತು ಮಂದಾರ ರಾಮಾಯಣಗಳಲ್ಲಿ ಸಂಸ್ಕೃತಿ

**ಡಾ ಶಂಕರ ಭಟ್ ಪಿ**
ಕನ್ನಡ ಸಹ ಪ್ರಾಧ್ಯಾಪಕರು ಸರಕಾರಿ ಪ್ರಥಮ ದರ್ಜೆ ಕಾಲೇಜು ವಿಟ್ಲ, ದ.ಕ. ಜಿಲ್ಲೆ.

ಶ್ರೀ ರಾಮಾಯಣ ದರ್ಶನಂ ಕನ್ನಡ ಮಹಾಕಾವ್ಯ. ಮಂದಾರ ರಾಮಾಯಣವು ತುಳು ಮಹಾಕಾವ್ಯ. ಈ ಎರಡು ಭಾಷೆಯ ಕಾವ್ಯಗಳ ವಸ್ತು ರಾಮಾಯಣ. ಎರಡು ಭಾಷೆಯ ಕಾವ್ಯಗಳಲ್ಲಿ ಭಿನ್ನ ಸಂಸ್ಕೃತಿಗಳಿರುವುದು ಸಹಜ. ಎರಡು ಕಾವ್ಯಗಳು ಮೂಡಿ ಬಂದ ಪ್ರದೇಶಗಳು ವಿಭಿನ್ನ. ಈ ಎರಡು ಕಾವ್ಯಗಳ ಸಂಸ್ಕೃತಿಗಳನ್ನು ತೌಲನಿಕವಾಗಿ ನೋಡುವುದರಿಂದ ಒಂದು ವಸ್ತುವಿನ ಮೂಲಕ ಭಿನ್ನ ಸಂಸ್ಕೃತಿಗಳು ಹೇಗೆ ಅಭಿವ್ಯಕ್ತವಾಗಿವೆ ಎಂದು ತಿಳಿಯುವುದಕ್ಕೆ ಸಾಧ್ಯ.

ಭಾಷೆಯು ಸಂಸ್ಕೃತಿಯ ವಾಹಕವಾಗಿದೆ. ಕುವೆಂಪು ಅವರು ಕನ್ನಡ ಭಾಷೆಯ ಮೂಲಕವಾಗಿ ತ್ರೇತಾಯುಗದ ವಿಚಾರಗಳನ್ನು ಶ್ರೀರಾಮಾಯಣ ದರ್ಶನಂ ಕಾವ್ಯದಲ್ಲಿ ಅಭಿವ್ಯಕ್ತಿಸಿದ್ದಾರೆ. ಇದರಿಂದಾಗಿ ಕಾವ್ಯದಲ್ಲಿ ಕರ್ನಾಟಕ ಸಂಸ್ಕೃತಿಯು ಕಂಡುಬರುತ್ತದೆ. ಕುವೆಂಪು ಅವರು ಹುಟ್ಟಿ ಬೆಳೆದದ್ದು ಮಲೆನಾಡಿನಲ್ಲಿ, ಓದಿದ್ದು ಕನ್ನಡ ಭಾಷೆ ಸಾಹಿತ್ಯ, ಆದ್ದರಿಂದ ಶ್ರೀ ರಾಮಾಯಣ ದರ್ಶನಂ ಕಾವ್ಯದಲ್ಲಿ ಕರ್ನಾಟಕ ಸಂಸ್ಕೃತಿಯು ಸಹಜವಾಗಿಯೇ ಬಂದಿದೆ.

ಕನ್ನಡ ಸಾಹಿತ್ಯದ ಅನೇಕ ಕಾವ್ಯಗಳ ಆರಂಭದಲ್ಲಿ ಕವಿಗಳು ಆರಾಧ್ಯ ದೇವರನ್ನು ಸ್ಮರಿಸುವುದು, ಪರಿಚಯ ಹೇಳಿಕೊಳ್ಳುವುದು, ಪೂರ್ವಕವಿಗಳನ್ನು ಸ್ಮರಿಸುವುದು ಒಂದು ಸಂಪ್ರದಾಯವಾಗಿ ಬಂದಿದೆ. ಶ್ರೀ ರಾಮಾಯಣ ದರ್ಶನಂ ಕಾವ್ಯದ ಮೊದಲ ಸಂಚಿಕೆಯಲ್ಲಿ ಪೂರ್ವ ಕವಿಗಳನ್ನು ಸ್ಮರಿಸಿದ್ದಾರೆ. ಅಲ್ಲದೆ ದೇವರ ಸ್ತುತಿ ಮತ್ತು ಸ್ವಪರಿಚಯ ಕಾವ್ಯದ ಮಧ್ಯಭಾಗಗಳಲ್ಲಿಯೂ ಕಂಡುಬರುತ್ತದೆ. ಈ ಪ್ರಾರ್ಥನೆಗಳಲ್ಲಿ ಕರ್ನಾಟಕ ಸಂಸ್ಕೃತಿಯು ವ್ಯಕ್ತವಾಗುತ್ತದೆ. ಶ್ರೀ ರಾಮಾಯಣದ ಕಥೆಯ ಮೂಲಕ ಇಲ್ಲಿಯ ಸಂಸ್ಕೃತಿಯನ್ನು ಅನಾವರಣಗೊಳಿಸುವುದು ನನ್ನ ದೃಷ್ಟಿಯಾಗಿತ್ತು, ಎಂದು ಮಂದಾರ ಕೇಶವ ಭಟ್ಟರು ವಿವರಿಸಿದ್ದಾರೆ. ಅವರ ಕಾವ್ಯದ ಎಲ್ಲಾ ಪ್ರದೇಶಗಳು ತುಳುನಾಡು, ಇದರಿಂದ ಸಹಜವಾಗಿ ತುಳು ಸಂಸ್ಕೃತಿಯು ಇಲ್ಲಿ ಅಭಿವ್ಯಕ್ತವಾಗುತ್ತದೆ. ಮಂದಾರ ರಾಮಾಯಣದ ಆರಂಭದಲ್ಲಿ ಕವಿ ಗುರುಗಳನ್ನು ಸ್ಮರಿಸಿ, ಗಣಪತಿಗೆ ಭಕ್ತಿಯ ಕಾಣಿಕೆ ಸಲ್ಲಿಸಿ, ಕಾವ್ಯ ಬರೆಯುವ ಕಾರ್ಯಕ್ಕೆ ಯಾವುದೇ ತೊಂದರೆಯಾಗದಂತೆ, ರಕ್ಷಿಸಬೇಕೆಂದು ಪ್ರಾರ್ಥನೆ ಸಲ್ಲಿಸುತ್ತಾರೆ. ತುಳುನಾಡಿನಲ್ಲಿ ಯಾವುದಾದರೂ ಕಾರ್ಯಕ್ಕೆ ತೊಡಗುವಾಗ ಗಣಪತಿಯೇ ಮೊದಲಾದ ದೇವರಿಗೆ ಪ್ರಾರ್ಥನೆ ಸಲ್ಲಿಸಿ ಗುರು ಹಿರಿಯರ ಆಶೀರ್ವಾದ ಪಡೆಯುವುದು ಸಂಪ್ರದಾಯ. ತುಳುನಾಡಿನ ಸಂಸ್ಕೃತಿಯು ಇಲ್ಲಿ ವ್ಯಕ್ತವಾಗುತ್ತದೆ. ಮಂದಾರ ರಾಮಾಯಣದಲ್ಲಿ ಪ್ರಾರ್ಥನೆಯ ಸಂದರ್ಭದ ಮಾತುಗಳು ತುಳುನಾಡಿನ ಭೂತಾರಾಧನೆಯ ಪ್ರಭಾವವನ್ನು ಹೊಂದಿದೆ. ಕವಿ ತಾಯಿಯನ್ನು ಸ್ಮರಿಸುವಾಗ ತುಳು ಸಂಸ್ಕೃತಿಯ ಮಾಹಿತಿಗಳನ್ನು ಬಳಸಿಕೊಂಡಿದ್ದಾರೆ. ಎರಡನೆಯ ಅಧ್ಯಾಯದಲ್ಲಿ ಹನುಮಂತನನ್ನು ಸ್ಮರಿಸುವುದು ಕಂಡುಬರುತ್ತದೆ. ಪ್ರಾರ್ಥನೆಯನ್ನು ಕಾವ್ಯದ ನಡುವೆ ತಂದಿರುವ ಕುವೆಂಪು ಅವರ ಪ್ರಭಾವವನ್ನು ಇಲ್ಲಿ ಗುರುತಿಸಬಹುದಾಗಿದೆ. ವಾಲ್ಮೀಕಿ ರಾಮಾಯಣ ದಲ್ಲಿ ಆರಾಧ್ಯ ದೇವರನ್ನು ಸ್ಮರಿಸುವ ಭಾಗವಿಲ್ಲ.

ಶ್ರೀರಾಮಾಯಣ ದರ್ಶನಂ ಕಾವ್ಯದಲ್ಲಿ ಕೆಲವು ಪಾತ್ರಗಳು ಕಥಾ ಸಂದರ್ಭಕ್ಕನುಗುಣವಾಗಿ ಪ್ರಾರ್ಥನೆ ಸಲ್ಲಿಸುವುದು ಕಾಣಿಸುತ್ತದೆ. ವಾಲ್ಮೀಕಿಯು ಬೇಡನಿಗೆ ಅಹಿಂಸಾ ಧೀಕ್ಷೆಯನ್ನು ನೀಡಿದ ಬಳಿಕ ಎಲೆಮನೆಗೆ ಬಂದು ಧ್ಯಾನ ಮಾಡುತ್ತಾನೆ. ಜಾಬಾಲಿಯು ಸಾತ್ವಿಕ ವಿಧಾನದ ಯಾಗ ಮಾಡೆಂದು ದಶರಥನಿಗೆ ತಿಳಿಸುವಾಗ, ಜನರ ಪ್ರಾರ್ಥನೆಯ ವಿಶೇಷವನ್ನು ಹೇಳುತ್ತಾರೆ. ಅಹಲ್ಯೆಯು ಶಿಲಾ ತಪಸ್ಸಿನ ಮಹಾ ಶಕ್ತಿಯಿಂದ ಭಗವಂತನನ್ನು ಸಾಕ್ಷಾತ್ಕರಿಸಿ ಕೊಳ್ಳುತ್ತಾಳೆ. ರಾವಣನು ಶಿವ ಧನುಸ್ಸಿಗೆ ಕೈ ಹಾಕಿದಾಗ, ಅವನು ಅದನ್ನು ಮುರಿಯದಂತೆ ದೇವರಲ್ಲಿ ಸೀತೆಯು ಪ್ರಾರ್ಥನೆ ಸಲ್ಲಿಸುವುದು ಕಂಡು ಬರುತ್ತದೆ. ಊರ್ಮಿಳೆಯು ಸರಯೂ ನದಿಯ ತೀರದಲ್ಲಿ ಹದಿನಾಲ್ಕು ವರ್ಷ ತಪಸ್ಸು ಮಾಡುತ್ತಾಳೆ. ಶಬರಿಯು ರಾಮನನ್ನು ನಿರೀಕ್ಷಿಸಿ ಪ್ರಾರ್ಥಿಸುವುದು ಹಲವು ವರ್ಷಗಳಿಂದ ನಡೆಯುತ್ತದೆ. ಹೀಗೆ ಕವಿ ಮತ್ತು ಪಾತ್ರಗಳು ವಿವಿಧ ರೀತಿಯ ಪ್ರಾರ್ಥನೆ ಸಲ್ಲಿಸುವ ಸಂದರ್ಭಗಳಲ್ಲಿ ಕರ್ನಾಟಕ ಸಂಸ್ಕೃತಿಯನ್ನು ಗುರುತಿಸ ಬಹುದಾಗಿದೆ. ಮಂದಾರ ರಾಮಾಯಣ ದಲ್ಲಿ ವಾಲ್ಮಿಕಿಯು ಪೂರ್ವಾಶ್ರಮದಲ್ಲಿ ಕುಡಿಯನಾಗಿರುತ್ತಾನೆ. ತುಳುನಾಡಿನ ಗುಡ್ಡಗಾಡು ಪ್ರದೇಶದಲ್ಲಿ ಮಲೆಕುಡಿಯರು ವಾಸಿಸುತ್ತಾರೆ. ಮಲೆಕುಡಿಯನ ಮನೆಯ ಪರಿಸರ, ಸಾಂಸಾರಿಕ ಜೀವನ, ದೈನಂದಿನ ಕಾರ್ಯಗಳ ವಿವರ ನೀಡುವ ಪ್ರಯತ್ನ ಕಾವ್ಯದಲ್ಲಿ ಕಂಡು ಬರುತ್ತದೆ. ಇಲ್ಲಿ ತುಳುನಾಡಿನ ಬಡ ಕುಟುಂಬದ ಸಾಂಸ್ಕೃತಿಕ ವಿವರಗಳು ಬರುತ್ತವೆ.

ಶ್ರೀರಾಮಾಯಣ ದರ್ಶನಂ ಕಾವ್ಯದಲ್ಲಿ ದಶರಥನ ರಾಣಿಯಂದಿರು ಗರ್ಭಿಣಿಯರಾದಾಗ ಪ್ರಕೃತಿ ಮತ್ತು ಪ್ರಜೆಗಳು ಸಂತೋಷಗೊಂಡ ವಿಚಾರ ಕಂಡುಬರುತ್ತದೆ. ಮಂದಾರ ರಾಮಾಯಣದಲ್ಲಿ ದಶರಥನ ರಾಣಿಯಂದಿರು ಗರ್ಭಿಣಿಯರಾದಾಗ ಅವರ ದೇಹ, ಮಾತು, ಸ್ವಭಾವಗಳಲ್ಲಿ ಆಗುವ ಬದಲಾವಣೆಗಳ ಚಿತ್ರಣ ಬರುತ್ತದೆ. ಗರ್ಭಿಣಿಯರಿಗೆ ಎಂಟನೆಯ ತಿಂಗಳಿನಲ್ಲಿ ಬಯಕೆಯ ಕಾರ್ಯಕ್ರಮವನ್ನು ವಿಧಿವತ್ತಾಗಿ ನಡೆಸುತ್ತಾರೆ. ಗರ್ಭಿಣಿಯರ ಇಚ್ಛೆಗಳನ್ನು ತೀರಿಸದಿರಬಾರದೆಂಬ ತುಳುನಾಡಿನ ಜನರ ನಂಬಿಕೆಯು ಈ ಸಂದರ್ಭದಲ್ಲಿ ವ್ಯಕ್ತವಾಗುತ್ತದೆ. ಇಲ್ಲಿ ಬಂದಿರುವ ಬಯಕೆಯ ಆಚರಣೆಗಳು ತುಳುನಾಡಿನ ಮಧ್ಯಮ ವರ್ಗದವರ ಆಚರಣೆಗಳಂತೆ ಕಂಡುಬರುತ್ತವೆ. ವಾಲ್ಮೀಕಿ ರಾಮಾಯಣ ದಲ್ಲಿ ಗರ್ಭಿಣಿಯರಿಗೆ ಸಂಬಂಧಿಸಿದ ವೈದಿಕ ಕ್ರಿಯೆಗಳ ವರ್ಣನೆ ಇಲ್ಲ.

ಶ್ರೀರಾಮಾಯಣ ದರ್ಶನಂ ಕಾವ್ಯದಲ್ಲಿ ದಶರಥನ ರಾಣಿಯಂದಿರು ಹಡೆದಾಗ ಅಯೋಧ್ಯೆಯ ಜನರು ಹಾಗೂ ದೇವಲೋಕದವರು ಸಂಭ್ರಮಿಸುವ ವಿಚಾರವು ಕಂಡು ಬರುತ್ತದೆ. ಮಂದಾರ ರಾಮಾಯಣದಲ್ಲಿ ದಶರಥನ ರಾಣಿಯಂದಿರ ಹೆರಿಗೆ ನೋವಿನ ವಿಚಾರ ತಿಳಿಸುತ್ತಾರೆ. ಬಳಿಕ ದಶರಥನಿಗೆ ಮಕ್ಕಳು ಜನಿಸಿದಾಗ ಕಲ್ಲು ಸಕ್ಕರೆ ಹಂಚಿದ್ದು ಮತ್ತು ಜನರಿಗಾದ ಸಂತೋಷವನ್ನು ವರ್ಣಿಸುವುದು ಕಂಡುಬರುತ್ತದೆ. ಕಾವ್ಯದ ಪಾತ್ರಗಳ ಜೀವನಕ್ಕೆ ಕೇಶವ ಭಟ್ಟರು ನೀಡಿದ ಮಹತ್ವ ಇದರಿಂದ ತಿಳಿಯ ಬಹುದಾಗಿದೆ. ಸೂರ್ಪನಖಿಯು ಹೆತ್ತ ಬಳಿಕ ಸೂತಕ ಕಳೆ ವಿಚಾರವನ್ನು ಕಾವ್ಯ ನಿರೂಪಿಸಿದ್ದಾರೆ. ಸಾಧ್ಯವಾದಷ್ಟು ತುಳುನಾಡಿನ ಸಾಂಸ್ಕೃತಿಕ ವಿಚಾರಗಳನ್ನು ಕವಿ ಕಾವ್ಯದಲ್ಲಿ ಚಿತ್ರಿಸಿದ್ದಾರೆ.

ಶ್ರೀರಾಮಾಯಣ ದರ್ಶನಂ ಕಾವ್ಯದಲ್ಲಿ ದಶರಥನು ತನ್ನ ಮಕ್ಕಳಿಗೆ ಪದ್ಧತಿಯ ಪ್ರಕಾರ ನಾಮಕರಣ ಮಾಡುತ್ತಾನೆ. ಬಳಿಕ ಪುರೋಹಿತರು ರಾಮ, ಲಕ್ಷ್ಮಣ, ಭರತ, ಶತ್ರುಘ್ನರ ಜಾತಕಗಳನ್ನು ಬರಯುತ್ತಾರೆ. ಹುಟ್ಟಿದ ಮಕ್ಕಳಿಗೆ ಜಾತಕವನ್ನು ಬರೆಯುವ ಕರ್ನಾಟಕ ಸಂಸ್ಕೃತಿಯನ್ನು ಇಲ್ಲಿ ಗುರುತಿಸ ಬಹುದಾಗಿದೆ. ಮಂದಾರ ರಾಮಾಯಣದಲ್ಲಿ ಕಾವ್ಯದಲ್ಲಿ ದಶರಥನಿಗೆ ಮಕ್ಕಳು ಜನಿಸಿದ ಹನ್ನೊಂದನೆಯ ದಿನ ಹೆತ್ತ ಸೂತಕವನ್ನು ಕಳೆಯುತ್ತಾರೆ. ನಾಮಕರಣ ಮಾಡುವುದು, ತೊಟ್ಟಿಲಲ್ಲಿ ಹಾಕುವುದು, ದೃಷ್ಟಿಯಾಗ ಬಾರದೆಂದು ದೃಷ್ಟಿಮಣಿ ಹಾಕುವುದು ಮೊದಲಾದ ಸಂಪ್ರದಾಯಗಳು ಈ ಕಾವ್ಯದಲ್ಲಿ ಕಂಡು ಬರುತ್ತದೆ. ಶ್ರೀರಾಮಾಯಣ ದರ್ಶನಂ ಕಾವ್ಯದಲ್ಲಿ ದಶರಥನ ಅಂತ್ಯ ಕ್ರಿಯೆಯಲ್ಲಿ ಸಾಂಸ್ಕೃತಿಕ ವಿಚಾರಗಳು ವ್ಯಕ್ತವಾಗಿವೆ. ಎಣ್ಣೆಯಲ್ಲಿ ಅದ್ದಿದ್ದ ದಶರಥನ ಶರೀರವನ್ನು ಶಿಬಿಕೆಯಲ್ಲಿರಿಸಿ, ಹೊತ್ತು ಕೊಂಡು ಹೋಗಿ ಚಿತೆಯಲ್ಲಿರಿಸುತ್ತಾರೆ. ಚಿತೆಯ ವಿವರ, ಋತ್ವಿಜರ ಸಾಮಗಾನ ಕಾವ್ಯದಲ್ಲಿ ಕಾಣಿಸುತ್ತದೆ. ಮಂದಾರ ರಾಮಾಯಣದಲ್ಲಿ ಕಾವ್ಯದಲ್ಲಿ ದಶರಥನು ಮರಣ ಹೊಂದುವ ಸಮಯ ಹತ್ತಿರವಾದಾಗ

ಗುರುಗಳು, ಮಂತ್ರಿಗಳು ಅವನ ಬಾಯಿಗೆ ನೀರು ಬಿಡುತ್ತಾರೆ, ದಶರಥನು ಮರಣ ಹೊಂದಿದಾಗ ದರ್ಭೆಯನ್ನು ನೆಲದ ಮೇಲೆ ಹರಡಿ ಅದರ ಮೇಲೆ ಶವವನ್ನು ಮಲಗಿಸುತ್ತಾರೆ. ಅಲ್ಲಿದ್ದ ಹಿರಿಯರು ಜಾತಿಯ ಸಂಪ್ರದಾಯದ ಪ್ರಕಾರ ನಡೆಸುವ ಕ್ರಿಯೆಗಳನ್ನು ನಡೆಸಿ, ಭರತನು ಬಂದ ಬಳಿಕ ಸಂಸ್ಕಾರ ನಡೆಸುವುದು ಕಂಡು ಬರುತ್ತದೆ. ಮರಣದ ಸಂದರ್ಭದಲ್ಲಿ ಎಲ್ಲರೂ ಬಂದು ಬಾಯಿಗೆ ನೀರು ಹಾಕುವುದು, ಶವವನ್ನು ದರ್ಭೆಯಲ್ಲಿ ಮಲಗಿಸುವುದು ಇವುಗಳೆಲ್ಲ ತುಳುನಾಡಿನ ಸಂಸ್ಕೃತಿಗಳಾಗಿವೆ. ಬಾಯಿಗೆ ನೀರಿಲ್ಲದೆ ಸಾಯಬಾರದೆಂಬ ತುಳುವರ ನಂಬಿಕೆಯು ಇಲ್ಲಿ ವ್ಯಕ್ತವಾಗಿದೆ.

ಶ್ರೀರಾಮಾಯಣ ದರ್ಶನಂ ಕಾವ್ಯದಲ್ಲಿ ವಾಲಿಯು ಮಡಿದಾಗ ತಾರೆಯು ವಾಲಿಯ ಚಿತೆಯನ್ನು ಏರುತ್ತಾಳೆ. ಯುದ್ಧದಲ್ಲಿ ಮಡಿದವರನ್ನೆಲ್ಲ ಸಾಮೂಹಿಕವಾಗಿ ಸಂಸ್ಕಾರ ಮಾಡಬೇಕೆಂದು ರಾವಣನು ಆಜ್ಞೆ ಮಾಡುತ್ತಾನೆ. ರಾವಣ ಮತ್ತು ಮಂಡೋದರಿ ಮಡಿದಾಗ ಅವರ ಕಳೇಬರವನ್ನು ಚಿತೆಯ ಮೇಲಿರಿಸಿದ ಬಳಿಕ, ಪುರೋಹಿತರು ಮಂತ್ರವನ್ನು ಪಠಿಸುತ್ತಾರೆ. ವಹ್ನಿಯು ರಂಹನ ಅಂತ್ಯಕ್ರಿಯೆಯನ್ನು ಮಾಡುತ್ತಾನೆ. ಕರ್ನಾಟಕ ಸಂಸ್ಕೃತಿಯು ಈ ಸಂದರ್ಭಗಳಲ್ಲಿ ಕಂಡುಬರುತ್ತದೆ. ರಾಮ, ಲಕ್ಷ್ಮಣ, ಭರತ, ಶತ್ರುಘ್ನರ ವಿವಾಹವು ಏಳು ದಿನಗಳ ಕಾಲ ನಡೆಯುತ್ತದೆ. ಮದುವೆಯ ಔತಣವನ್ನು ನಡೆಸುತ್ತಾರೆ. ಬಳಿಕ ಮದುವೆಯ ದಿಬ್ಬಣವು ಅಯೋಧ್ಯೆಗೆ ಬರುತ್ತದೆ. ಮದುವೆ, ದಿಬ್ಬಣ, ಔತಣಗಳ ವಿಚಾರದಲ್ಲಿ ಕರ್ನಾಟಕ ಸಂಸ್ಕೃತಿಯು ಅಭಿವ್ಯಕ್ತವಾಗಿದೆ. ಮಂದಾರ ರಾಮಾಯಣದಲ್ಲಿ ಹರಧನುಸ್ಸನ್ನು ಮುರಿದವರಿಗೆ ಸೀತೆಯನ್ನು ಮದುವೆ ಮಾಡಿ ಕೊಡುವ ವಿಚಾರವಿದೆ. ರಾಮನು ಹರಧನುಸ್ಸನ್ನು ಮುರಿದ ಬಳಿಕ ಅಯೋಧ್ಯೆಯಿಂದ ಮದುವೆಯ ದಿಬ್ಬಣ ಬರುತ್ತದೆ. ದಿಬ್ಬಣವನ್ನು ಕೋಸಲದವರು ಎದುರುಗೊಳ್ಳುತ್ತಾರೆ. ಮದುವೆಯ ಸನ್ನಿವೇಶದಲ್ಲಿ ವೇಷಭೂಷಣ, ಊಟ ಉಪಚಾರಗಳ ಮಾಹಿತಿಗಳಿವೆ. ನಾಲ್ಕು ದಿನದ ಬಳಿಕ ಸಮ್ಮಾನ ನಡೆದು ದಿಬ್ಬಣವು ಅಯೋಧ್ಯೆಗೆ ಹೊರಡುತ್ತದೆ. ಅಂಗದ, ಸೋಮಕ್ಕ ಇವರ ವಿವಾಹ ಕಿಸ್ಕಿಂಧೆಯಲ್ಲಿ ನಡೆಯುವಾಗ ಮುಹೂರ್ತದ ಕಂಬವನ್ನು ಹಾಕುತ್ತಾರೆ. ಮದುಮಗನ ದಿಬ್ಬಣವನ್ನು ಚಪ್ಪರಕ್ಕೆ ಆಹ್ವಾನಿಸಿ ವೀಳ್ಯದ ಹರಿವಾಣವನ್ನು ನೀಡಿ ಮರ್ಯಾದೆಯನ್ನು ಸಲ್ಲಿಸುತ್ತಾರೆ. ಮುಹೂರ್ತಕ್ಕೆ ಧಾರೆಯನ್ನು ಮಾಡಿ ಬಳಿಕ ವಿಜೃಂಭಣೆಯ ಊಟ ಮಾಡುವುದು ಕಂಡು ಬರುತ್ತದೆ. ಮಾರನೆಯ ದಿನ ಚಪ್ಪರ ತೆಗೆಯುವ ಊಟವನ್ನು ಕೊಡುತ್ತಾರೆ. ಸೂರ್ಪನಖಿಯ ಗಂಡನು ಸತ್ತ ಬಳಿಕ, ನಿನಗೆ ಬೇಕಾದ ಗಂಡು ಇದ್ದರೆ ಮದುವೆ ಅಥವಾ ಕೈಪತ್ತಾವುನಿ ನಡೆಸುವುದಾಗಿ ರಾವಣನು ಹೇಳುತ್ತಾನೆ. ಹೀಗೆ ಈ ಎಲ್ಲಾ ಸಂದರ್ಭಗಳಲ್ಲಿ ತುಳುನಾಡಿನ ವಿವಾಹ ಹಾಗೂ ಅದಕ್ಕೆ ಸಂಬಂಧಿಸಿದ ಆಚರಣೆಗಳ ವಿವರಗಳು ಕಂಡು ಬರುತ್ತವೆ. ಗಂಡ ಸತ್ತ ಅಥವಾ ಗಂಡ ಬಿಟ್ಟ ಹೆಣ್ಣಿಗೆ ಪುನಃ ಮದುವೆ ನಡೆಸುವ ಆಚರಣೆಯನ್ನು ಕೈಪತ್ತಾವುನಿ ಎನ್ನುತ್ತಾರೆ. ವಾಲ್ಮೀಕಿ ರಾಮಾಯಣದಲ್ಲಿ ರಾಮ, ಲಕ್ಷಣ, ಭರತ, ಶತ್ರುಘ್ನರ ವಿವಾಹವನ್ನು ಶಾಸ್ತ್ರೋಕ್ತವಾಗಿ ನಡೆಸುತ್ತಾರೆ. ದಿಬ್ಬಣ ಎದುರುಗೊಳ್ಳುವ ಸನ್ನಿವೇಶವಿಲ್ಲ.

ಶ್ರೀರಾಮಾಯಣ ದರ್ಶನಂ ಕಾವ್ಯದಲ್ಲಿ ರಾವಣನು ಶತ್ರು ಸೈನ್ಯವನ್ನು ನಾಶ ಮಾಡುವ ಶಕ್ತಿ ಪಡೆಯಲು ಪೂಜಾನಿರತನಾಗುತ್ತಾನೆ. ರಾಜ ಪುರೋಹಿತರು ಆಯುಧಾಗಾರದಲ್ಲಿ, ಅಯುಧ ರೂಪಿಯಾದ ದುರ್ಗೆಯನ್ನು ಚರು, ರಕ್ತ ಬಲಿಗಳಿಂದ ಪೂಜಿಸುತ್ತಾರೆ. ಮಂತ್ರಪಠಿಸಿ ಆರತಿ ಎತ್ತಿ ವಾದ್ಯಗಳನ್ನು ಮೊಳಗಿಸಿ, ಆಯುಧಗಳಿಗೆ ಪೂಜೆಸಲ್ಲಿಸುವುದು ಕಂಡುಬರುತ್ತದೆ. ಆಯುಧಗಳನ್ನು ಪೂಜಿಸುವುದು ಕರ್ನಾಟಕ ಮತ್ತು ತುಳು ಸಂಸ್ಕೃತಿಗಳೆರಡರಲ್ಲಿಯೂ ಕಾಣುತ್ತೇವೆ. ಕರ್ನಾಟಕ ಮತ್ತು ತುಳುನಾಡಿನ ಅರಸರು ಯುದ್ಧದ ಮತ್ತು ನವರಾತ್ರಿಯ ಸಂದರ್ಭಗಳಲ್ಲಿ ಆಯುಧ ಪೂಜೆ ನಡೆಸುವ ವಿಚಾರ ಇತಿಹಾಸದಿಂದ ನಮಗೆ ತಿಳಿಯುತ್ತದೆ. ನವರಾತ್ರಿಯ ಸಂದರ್ಭದಲ್ಲಿ ಆಯುಧ ಪೂಜೆ ನೆರವೇರಿಸುವುದು ಇಂದು ಕೂಡ ಕಾಣಿಸುತ್ತದೆ. ಶ್ರೀರಾಮಾಯಣ ದರ್ಶನಂ ಮತ್ತು ಮಂದಾರ ರಾಮಾಯಣ ಎರಡರಲ್ಲಿಯೂ ಈ ಸಾಂಸ್ಕೃತಿಕ ವಿಚಾರವು ಕಂಡು ಬರುತ್ತದೆ.

ಶ್ರೀರಾಮಾಯಣ ದರ್ಶನಂ ಕಾವ್ಯದಲ್ಲಿ ಇಂದ್ರಜಿತು ಯುದ್ಧದ ಸಂದರ್ಭ ಬಂದಾಗ ಗೆಲುವಿಗಾಗಿ ಅಭಿಚಾರಿಕ ಹೋಮ ಮಾಡುತ್ತಾನೆ. ಮಂದಾರ ರಾಮಾಯಣದಲ್ಲಿ ರಾವಣನು ದೊಂಬಕಣಿಯನೆಂಬ ಮಾಂತ್ರಿಕನ ಮೂಲಕ ಯುದ್ಧದ ಗೆಲುವಿಗಾಗಿ,

**Review Of Research**
**Vol -2 , ISSUE –III, Dec - 2012**
**ISSN No - 2249-894X** Available online at www.ror.isrj.org

ಮಾಟಮಾಡಿಸುವುದು ಕಂಡು ಬರುತ್ತದೆ. ರಾವಣನು ಕುಂಭಕರ್ಣನಿಗೆ ಮದ್ದು ಹಾಕಿದ್ದಾನೆಂದು ಈ ಕಾವ್ಯದಲ್ಲಿ ತಿಳಿಸುತ್ತಾರೆ. ಮಾಟಮಂತ್ರಗಳ ಬಗ್ಗೆ ಕರ್ನಾಟಕದಲ್ಲಿ ನಂಬಿಕೆಗಳು ಕಂಡುಬರುತ್ತವೆ. ಈ ಕರ್ನಾಟಕ ಮತ್ತು ತುಳು ಸಂಸ್ಕೃತಿಯು ಕಾವ್ಯಗಳಲ್ಲಿ ಸಾಂದರ್ಭಿಕವಾಗಿ ಅಭಿವ್ಯಕ್ತವಾಗಿವೆ. ವಾಲ್ಮೀಕಿ ರಾಮಾಯಣದಲ್ಲಿ ಇಂದ್ರಜಿತು ವಿಧಿ ಪೂರ್ವಕವಾಗಿ ಅಭಿಚಾರಿಕ ಹೋಮ ನಡೆಸುತ್ತಾನೆ. ಅದರ ವಿವರಗಳ ವರ್ಣನೆ ಕಂಡುಬರುವುದಿಲ್ಲ. ಶ್ರೀರಾಮಾಯಣ ದರ್ಶನಂ ಕಾವ್ಯದಲ್ಲಿ ಅನೇಕ ಪಾತ್ರಗಳು ಕನಸು ಕಾಣುವ ವಿಚಾರವನ್ನು ಚಿತ್ರಿಸುತ್ತಾರೆ. ಕೆಲವು ಸಂದರ್ಭಗಳಲ್ಲಿ ಘಟನೆಗಳನ್ನು ಕನಸುಗಳ ಮೂಲಕವಾಗಿ ಮುಂದುವರಿಸಿಕೊಂಡು ಹೋಗುತ್ತಾರೆ. ಮಂದಾರ ರಾಮಾಯಣದಲ್ಲಿಯೂ ಕನಸಿಗೆ ಮಹತ್ವ ನೀಡಿರುವುದು ಕಂಡುಬರುತ್ತದೆ. ಅಹಲ್ಯೆಯು ಇಂದ್ರನನ್ನು ಕನದರಿಸಿದ ಕಾರಣ ಗೌತಮನಿಗೆ ಅವಳಲ್ಲಿ ಮನಸ್ತಾಪ ಉಂಟಾಗುತ್ತದೆ. ರುಚ್ಚರಜಸುವು ಎರಡು ಸಂದರ್ಭಗಳಲ್ಲಿ ಕನಸುಕಾಣಿತ್ತಾನೆ. ಅವನಿಗೆ ಕಿಸ್ಕಿಂದಾಯ ದೈವವು ಕನಸಿನಲ್ಲಿ ಕಾಣಿಸಿಕೊಂಡು ದೈವಸ್ಥಾನ ಕಟ್ಟಿಸಲು ತಿಳಿಸಿ, ನಿನಗೆ ಮಕ್ಕಳಾಗುತ್ತದೆಂಬ ಅಭಯವನ್ನು ನೀಡುತ್ತದೆ. ರುಚ್ಚರಜಸುದಿನ ಮಡದಿಗೆ ಇಂದ್ರ ಮತ್ತು ಸೂರ್ಯ ಕನಸಿನಲ್ಲಿ ಮಕ್ಕಳ ಅನುಗ್ರಹ ನೀಡುತ್ತಾರೆ. ಕನಸು ಕಂಡಾಗ ಅದಕ್ಕೆ ಶುಭ ಅಥವಾ ಅಶುಭ ಫಲವನ್ನು ಪಡೆಯುತ್ತೇವೆಂಬ ನಂಬಿಕೆಯು ಭಾರತೀಯರಲ್ಲಿದೆ. ಈ ನಂಬಿಕೆಯ ಇಲ್ಲಿ ಅಭಿವ್ಯಕ್ತವಾಗಿದೆ.

ಶ್ರೀರಾಮಾಯಣ ದರ್ಶನಂ ಕಾವ್ಯದಲ್ಲಿ ದಶರಥನು ಮಕ್ಕಳಿಗೆ ಗುರು ವಸಿಷ್ಠನ ನೇತೃತ್ವದಲ್ಲಿ ವಿದ್ಯಾಭ್ಯಾಸ ಆರಂಭಿಸುತ್ತಾನೆ. ಮಕ್ಕಳು ಬಿಲ್ವಿದ್ಯೆ, ವೇದ, ನೀತಿ ನಯಗಳನ್ನು ಕಲಿಯುತ್ತಾರೆ. ಮಂದಾರ ರಾಮಾಯಣದಲ್ಲಿ ದಶರಥನು ಮಕ್ಕಳಿಗೆ ಉಪನಯನ ಮಾಡಿ ವಿದ್ಯಾಭ್ಯಾಸ ಮಾಡಿಸುತ್ತಾನೆ. ಮಕ್ಕಳು ವೇದ, ಶಾಸ್ತ್ರ, ಪುರಾಣ, ಅರಸು ನೀತಿ, ಅರ್ವತ್ನಾಲ್ಕು ವಿದ್ಯೆ, ಈಟಿ ಬೀಸುವುದು, ಕತ್ತಿ, ಗದೆ ಬೀಸುವುದು, ಕುದರೆ ಸವಾರಿ, ತಪ್ಪಂಗಾಯಿ, ಶಕ್ತಿಕಲ್ಲುಗಳನ್ನೆತ್ತುವುದು ಇವುಗಳನ್ನು ಕಲಿಯುತ್ತಾರೆ. ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸುವುದು ಭಾರತದ ಪ್ರಾಚೀನ ಸಂಸ್ಕೃತಿಯಾಗಿದೆ. ಶ್ರೀರಾಮಾಯಣ ದರ್ಶನಂ ಕಾವ್ಯದಲ್ಲಿ ಕರ್ನಾಟಕ ಸಂಸ್ಕೃತಿ ಗನುಗುಣವಾಗಿ ವಿದ್ಯಾಭ್ಯಾಸದ ವಿವರಗಳು ಕಾಣಿಸುತ್ತವೆ. ಮಂದಾರ ರಾಮಾಯಣದಲ್ಲಿ ಕರ್ನಾಟಕ ಮತ್ತು ತುಳು ಸಂಸ್ಕೃತಿಗಳೆರಡೂ ಅಡಕವಾಗಿವೆ. ವಾಲ್ಮೀಕಿ ರಾಮಾಯಣದಲ್ಲಿ ಮಕ್ಕಳು ಧನುರ್ವೇದ ಪಾರಂಗತರಾಗಿ ವೇದಾಧ್ಯಯನ ಮಾಡುತ್ತ ತಂದೆಯ ಶುಶ್ರೂಷೆ ನಡೆಸುತ್ತಾರೆ. ಹೀಗೆ ಶ್ರೀರಾಮಾಯಣ ದರ್ಶನಂ ಮತ್ತು ಮಂದಾರ ರಾಮಾಯಣದಲ್ಲಿ ಕಥೆಯ ಮೂಲಕ ಸಾಂಸ್ಕೃತಿಕ ವಿಚಾರಗಳು ಅಭಿವ್ಯಕ್ತವಾಗಿವೆ. ಮಂದಾರ ರಾಮಾಯಣದಲ್ಲಿ ಇವುಗಳಲ್ಲದೆ ಕಾವ್ಯದ ಅನೇಕ ಸಂದರ್ಭಗಳಲ್ಲಿ ತುಳುನಾಡಿನ ಸಂಸ್ಕೃತಿಯು ಕಂಡುಬರುತ್ತದೆ.

**ಗ್ರಂಥ ಋಣ :**

1. ಶ್ರೀರಾಮಾಯಣ ದರ್ಶನಂ - ಕುವೆಂಪು
2. ಮಂದಾರ ರಾಮಾಯಣ – ಮಂದಾರ ಕೇಶವ ಭಟ್ಟ
3. ಶ್ರೀ ಮದ್ವಾಲ್ಮೀಕಿ ರಾಮಾಯಣಮ್ – ಎನ್. ರಂಗನಾಥ ಶರ್ಮ